# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1669 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮಠಾಣಾ ಎಂದರೇನು; ಗ್ರಾಮಠಾಣಾ ಆಸ್ತಿಗಳ ದಾಖಲೆಗಳನ್ನು ಯಾವ ವರ್ಷದವರೆಗೆ ಕಂದಾಯ ಇಲಾಖೆ ನಿರ್ವಹಿಸುತ್ತಿತ್ತು; ನಂತರ ಯಾವ ಇಲಾಖೆಗೆ ಹಸ್ತಾಂತರ ಮಾಡಿತು; ಯಾವ ಪ್ರಕಾರದಲ್ಲಿ ಹಿಂದೆ ದಾಖಲೆಗಳನ್ನು ನಿರ್ವಹಿಸಲಾಗುತ್ತಿತ್ತು; | ಭೂಮಾಪನ ಇಲಾಖೆಯ ಸರ್ವೆ ಮ್ಯಾನುವಲ್ (Karnataka Revenue Survey Manual, Vol-1) ರಂತೆ ಗ್ರಾಮಾ ಠಾಣಾ ಎಂದರೆ ಹಳ್ಳಿಯ ಜನವಸತಿ ಪ್ರದೇಶ ಅಥವಾ ಗ್ರಾಮದ ಜಾಗ (Village-Site) ಎಂದು ಇರುತ್ತದೆ.<br>ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮಿನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ ಪ್ರದೇಶಗಳನ್ನು (ಗ್ರಾಮಠಾಣಾವನ್ನು) ಜಮೀನು ಸ್ಥಿತಿಯಂತೆ ಗುರ್ತಿಸಿ ಗ್ರಾಮ ನಕಾಶೆಯಲ್ಲಿ " **ಊರು** " ಎಂದು ದಾಖಲಿಸಲಾಗಿದೆ. ಯಾವುದೇ ಕಾಲದಲ್ಲಿ/ಸಮಯದಲ್ಲಿ ಗ್ರಾಮಠಾಣಾ ಆಸ್ತಿಗಳ ದಾಖಲೆಗಳನ್ನು ಕಂದಾಯ ಇಲಾಖೆ ನಿರ್ವಹಿಸಿರುವುದಿಲ್ಲ ಮತ್ತು ಹಸ್ತಾಂತರಿಸಿರುವುದಿಲ್ಲ.<br>ಹಿಂದಿನ ವಿಲೇಜ್ ಪಂಚಾಯತಿಗಳಿಗೆ ಸ್ಥಳೀಯ ಗ್ರಾಮ ಲೆಕ್ಕಿಗರನ್ನು (Village Accountant) ಗ್ರಾಮ ಪಂಚಾಯತಿಯ ಪದನಿಮಿತ್ತ ಕಾರ್ಯದರ್ಶಿಗಳಾಗಿ ನೇಮಿಸಲಾಗುತ್ತಿತ್ತು. ಮಂಡಲ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದ ನಂತರ ಕೆಲವೊಂದು ಮಂಡಲ ಪಂಚಾಯತಿಗಳಲ್ಲಿ ಕಾರ್ಯದರ್ಶಿಗಳನ್ನು ಜಿಲ್ಲಾಧಿಕಾರಿಗಳು ನೇಮಿಸಿದ್ದು, ಇನ್ನುಳಿದ ಮಂಡಲ ಪಂಚಾಯತಿಗಳಲ್ಲಿ ಕೃಷಿ ಇಲಾಖೆಯ ಹಿಂದಿನ ಗ್ರಾಮ ಸೇವಕರು (ಪ್ರಸ್ತುತ ಕೃಷಿ ಸಹಾಯಕರು) ಪದನಿಮಿತ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗುತ್ತಿತ್ತು. ಸದರಿ ಅಧಿಕಾರಿಗಳು ಗ್ರಾಮ ಪಂಚಾಯತಿ ದಾಖಲೆಗಳನ್ನು ನಿರ್ವಹಿಸುತ್ತಿದ್ದರು. |
| (ಆ) | ರಾಜ್ಯದ ಸುಮಾರು ಎಷ್ಟು ಗ್ರಾಮಠಾಣಾಗಳಿಗೆ ತಲೆಮಾರುಗಳಿಂದ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲ; (ಜಿಲ್ಲಾವಾರು ವಿವರ ನೀಡುವುದು) ಮತ್ತು ಗ್ರಾಮಠಾಣಾ ಆಸ್ತಿಗಳಿಗೆ ಕಾನೂನು ಮಾನ್ಯತೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ವತಿಯಿಂದ ಜಂಟಿಯಾಗಿ ಅನುಷ್ಠಾನಗೊಳಿಸಲಾಗುತ್ತಿರುವ "ಸ್ವಾಮಿತ್ವ" ಯೋಜನೆಯಡಿ ರಾಜ್ಯದ 25,831 ಗ್ರಾಮಗಳ ಜನವಸತಿ ಪ್ರದೇಶದ ಡ್ರೋಣ್ ಸರ್ವೆ ಪೂರ್ಣಗೊಂಡಿದ್ದು, ಇದರಲ್ಲಿ 5,031 ಗ್ರಾಮಗಳ ಒಟ್ಟು 10.54 ಲಕ್ಷ ಆಸ್ತಿಗಳಿಗೆ ಸ್ವಾಮಿತ್ವ ಪಿ.ಆರ್.ಕಾರ್ಡ (ಆಸ್ತಿ ಪ್ರಕಟಣಾ ಪತ್ರ) ನೀಡಲಾಗಿದೆ. ಸ್ವಾಮಿತ್ವ ಪಿ.ಆರ್.ಕಾರ್ಡ ವಿತರಿಸಿರುವ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ. |

| | | |
|---|---|---|
| (ಇ) | ರಾಜ್ಯದ ಎಷ್ಟು ಗ್ರಾಮಗಳ ಗ್ರಾಮಠಾಣಾ ಆಸ್ತಿಗಳನ್ನು ಸರ್ವೆ ಮಾಡಲಾಗಿದೆ; ಎಷ್ಟು ಆಸ್ತಿಗಳಿಗೆ ಆಸ್ತಿ ಕಾರ್ಡ್ ನೀಡಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | |
| (ಈ) | ರಾಜ್ಯದ ಎಲ್ಲಾ ಗ್ರಾಮಗಳ ಗ್ರಾಮಠಾಣಾ ಆಸ್ತಿಗಳಿಗೆ ಶೀಘ್ರವಾಗಿ ಆಸ್ತಿ ಕಾರ್ಡ್ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ಮತ್ತು ಆಸ್ತಿ ಕಾರ್ಡ್ ವಿತರಿಸಲು ಆಸ್ತಿ ಮಾಲೀಕರಿಂದ ಪಡೆಯುವ ದಾಖಲೆಗಳು ಯಾವುವು; ಅನುಸರಿಸುವ ಪ್ರಕ್ರಿಯೆ ಏನು; (ಇದಕ್ಕೆ ಸಂಬಂಧಿಸಿದ ಆದೇಶ/ಸುತ್ತೋಲೆಯ ಪ್ರತಿಯನ್ನು ನೀಡುವುದು); | ಈ ಹಿಂದೆ ಕೇವಲ 16 ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದ್ದ ಸ್ವಮಿತ್ವ ಯೋಜನೆಯನ್ನು ಪ್ರಸ್ತುತ ರಾಜ್ಯದ್ಯಂತ ವಿಸ್ತರಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ.<br><br>ಸ್ವಮಿತ್ವ ಯೋಜನ ಅನುಷ್ಠಾನದಲ್ಲಿ ಭೂಮಾಪನ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ತಂಡ ಸ್ಥಳ ಪರಿಶೀಲಿಸಿದ ನಂತರದಲ್ಲಿ ಪಂಚಾಯತ್ ರಾಜ್ ಇಲಾಖೆಯಿಂದ ಒದಗಿಸಲಾಗುವ ಮಾಲೀಕರ ವಿವರಗಳನ್ನು (Form-2) ಪಡೆಯಲಾಗುತ್ತದೆ. ಈ ಯೋಜನೆಯಡಿ ಮಾಲೀಕತ್ವವನ್ನು ದಾಖಲಿಸಲು ಮಾಲೀಕರಿಂದ ನೇರವಾಗಿ ಯಾವುದೇ ದಾಖಲೆಗಳನ್ನು ಪಡೆಯಲಾಗುತ್ತಿಲ್ಲ. |
| (ಉ) | ಬೆಂಗಳೂರು ನಗರ ಜಿಲ್ಲೆಯ ಗ್ರಾಮಗಳ ಗ್ರಾಮಠಾಣಾ ಆಸ್ತಿಯ ಮೌಲ್ಯ ಹೆಚ್ಚಾಗಿದ್ದು, ವ್ಯಾಜ್ಯಗಳು ಸಹ ಹೆಚ್ಚಾಗಿ ಕಂಡು ಬರುತ್ತಿದ್ದು, ಸದರಿ ಆಸ್ತಿಗಳಿಗೆ ಆದಷ್ಟು ಶೀಘ್ರವಾಗಿ ಆಸ್ತಿ ಕಾರ್ಡ್ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಸ್ವಮಿತ್ವ ಯೋಜನೆಯ ಮೂಲ ಉದ್ದೇಶ ಗ್ರಾಮೀಣ ಜನ ವಸತಿ ಪ್ರದೇಶದ ಆಸ್ತಿಗಳನ್ನು ದಾಖಲಿಸುವುದಾಗಿದೆ. ಬೆಂಗಳೂರು ನಗರ ಜಿಲ್ಲೆ ಬಹುಪಾಲು ನಗರೀಕರಣಗೊಂಡಿರುವುದರಿಂದ ಬೆಂಗಳೂರು ನಗರ ಜಿಲ್ಲೆಯು ಸ್ವಮಿತ್ವ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. |

**ಸಂಖ್ಯೆ: ಕಂಇ 60 ಎಸ್‌ಎಸ್‌ಸಿ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

Scanned with OKEN Scanner